ಬಾರ್ಡರ್‌ನಲ್ಲಿ ಇರತಕ್ಕಂಥ, ನಮ್ಮಲ್ಲಿ ಇರತಕ್ಕಂಥ, ಅಲ್ಲಿ ಬರತಕ್ಕಂಥ ..... ಕೇಳಿ. ಶ್ರೀರಾಮರೆಡ್ಡಿಯವರೇ ಇದಕ್ಕೆ ಸರಿ ಹೋಗುವುದಿಲ್ಲ. ಏಕೆಂದರೆ ನಕ್ಸಲೈಟ್ activities ಕೇವಲ it is not confined to Karnataka State. ಪಾವಗಡದ ವೆಂಕಟಮ್ಮನ ಹಳ್ಳಿಯಲ್ಲೇನು ಆಗಿದೆ, ಆಂಧ್ರದಿಂದ ಬಂದವರು ಅಲ್ಲಿ ಆ ರೀತಿಯಾಗಿ ಹತ್ಯೆ ಮಾಡಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, It is a very important and sensitive issue. ಆದ್ದರಿಂದ ಈ ವಿಚಾರವನ್ನು ನಮಗೆ ಬಿಡಿ. ನಮ್ಮ ಮೇಲೆ ವಿಶ್ವಾಸ ಇಡಿ. ನಾವು ಸರಿಯಾದ ರೀತಿಯಲ್ಲಿ .....

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಒಂದು ವಿಷಯವನ್ನು ಹೇಳಲು ಮರೆತೆ. ಆ ಘಟನೆಯಾದ ಮೇಲೆ ನಮ್ಮ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳು ಆಂಧ್ರ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿನ ಮುಖ್ಯಮಂತ್ರಿಗಳನ್ನೂ ಸಹ ಭೇಟಿಯಾಗಿ ಬಂದರು. ನಾನೂ ಸಹ ಅಲ್ಲಿನ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಮಾನ್ಯ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, ನೀವು ಆ ಭಾಗದಲ್ಲಿ ಹೋದರೆ ಪ್ರತಿಕ್ರಿಯೆ ಬೇರೆ ರೀತಿಯಲ್ಲಿ ಬರುತ್ತದೆ, ಇದನ್ನು ಸಂಯಮದಿಂದ ನಾವು ಮತ್ತು ನೀವು ಕುಳಿತುಕೊಂಡು ಬಗೆಹರಿಸೋಣ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ನಾನು ಹೇಳುತ್ತೇನೆ, ಕೇಳಿ. ಬೇಕಾದರೆ ನಿಮ್ಮೆಲ್ಲರನ್ನೂ ಕೂಡ ಕರೆದುಕೊಂಡು ಹೋಗುತ್ತೇನೆ, ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ರಾಜಶೇಖರ ರೆಡ್ಡಿಯವರ ಜೊತೆಗೆ ಭೇಟಿ ಮಾಡಿ ಮಾತನಾಡೋಣ. ಇದು ಸೂಕ್ಷ್ಮವಾದ ವಿಚಾರವಾಗಿದೆ. ಇದನ್ನು ನೀವು ನನಗೆ ಬಿಡಿ. ನಾನು ಇದರ ಬಗ್ಗೆ ತನಿಖೆ ಮಾಡಿ ತಮಗೆ ತಿಳಿಸುತ್ತೇನೆ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಛೇರ್‌ಮನ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಚರ್ಚೆ ಮುಗಿಯಿತು.

ಪ್ರಕಟಣೆ

ಇಂದು ಸಂಜೆ 6.00 ಗಂಟೆಗೆ ಕೋರಮಂಗಲದ ಪಿವಿಆರ್ ಘೋರಂನಲ್ಲಿ ಬ್ಲ್ಯಾಕ್ ಚಿತ್ರವನ್ನು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರ ವೀಕ್ಷಣೆಗಾಗಿ ಏರ್ಪಡಿಸಲಾಗಿದೆ. ಎಂದು ಕಾಮನ್‌ವೆಲ್ತ್ ಸಂಸದೀಯ ಸಂಘ ಕರ್ನಾಟಕ ಶಾಖೆ ವತಿಯಿಂದ ಘೋಷಣೆಯಾಗಿದೆ.

ಛೇರ್ಮನ್ : ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ. (ಸದನವು ಸಂಜೆ 6.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ : 16ನೇ ಮಾರ್ಚ್ 2005 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ- I

1536(2107) ಶ್ರೀ ಅಂಗಾರ.ಎಸ್(ಸುಳ್ಯ) ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ ನಗರ ಪಂಚಾಯತ್‌ಗೆ ಒಳಚರಂಡಿ ಯೋಜನೆ ಮಂಜೂರಾಗಿದ್ದು, ಶುದ್ಧೀಕರಣ ಘಟಕಕ್ಕೆ, ಮತ್ತು ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡಲು ಸ್ಥಳವು ನಿಗದಿಯಾಗದೆ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಸ್ಥಳ ನಿಗದಿಗೊಳಿಸಿ ಕಾಮಗಾರಿ ಪೂರ್ಣಗೊಳಿಸಲು ಇರುವ ತೊಂದರೆಗಳೇನು;

3. ಸ್ಥಳ ನಿಗದಿಗೊಳಿಸಿ ಕಾಮಗಾರಿ ಪರ್ಣಗೊಳಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು):

1. ಬಂದಿದೆ.

2. ಒಳಚರಂಡಿ ನೀರಿನ ಶುದ್ದೀಕರಣ ಘಟಕ ನಿರ್ಮಿಸಲು 3 ಎಕರೆ ಜಾಗವನ್ನು ಈಗಾಗಲೇ ಗೊತ್ತುಪಡಿಸಲಾಗಿದ್ದು, ತೋಟಗಾರಿಕೆ ಇಲಾಖೆಯಿಂದ ಹಸ್ತಾಂತರಗೊಳಿಸಬೇಕಾಗಿದೆ.

3. ತೋಟಗಾರಿಕೆ ಇಲಾಖೆಯಿಂದ 3 ಎಕರೆ ಜಾಗವನ್ನು ಖರೀದಿಸಲು ರೂ.4.76 ಲಕ್ಷವನ್ನು ದಿನಾಂಕ 9.3.2005 ರಂದು ಪಾವತಿ ಮಾಡಲಾಗಿದೆ. ತೋಟಗಾರಿಕೆಯ ಇಲಾಖೆಯು ಜಾಗವನ್ನು ಹಸ್ತಾಂತರಿಸಿದ ನಂತರ, ಒಳಚರಂಡಿ ಶುದ್ದೀಕರಣ ಘಟಕವನ್ನು ಕೈಗೆತ್ತಿಕೊಳ್ಳಲಾಗುವುದು.

1537(2108) ಶ್ರೀ ಅಂಗಾರ. ಎಸ್.(ಸುಳ್ಯ)ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ–ಕೊಡಿಯಾಲ್ ಬೈಲು–ದುಗ್ಗಲಡಕ ರಸ್ತೆ ಅಭಿವೃದ್ದಿಗೆ ಹುಡ್ಕೋ ನೆರವಿನಿಂದ ಹಣ ಪಡೆದಿರುವುದು ನಿಜವೇ;

2. ಪಡೆದಿರುವ ನೆರವಿನ ಮೊತ್ತ ಎಷ್ಟು ;

3. ಈ ಹಣದಿಂದ ಇದುವರೆಗೂ ವೆಚ್ಚ ಮಾಡಿರುವ ಹಣ ಎಷ್ಟು ; ರಸ್ತೆ ಕಾಮಗಾರಿಗಳು ಯಾವ ಹಂತದಲ್ಲಿವೆ ;

4. ರಸ್ತೆ ಕಾಮಗಾರಿಯನ್ನು ಪಡೆದಿರುವ ಗುತ್ತಿಗೆದಾರರು ಯಾರು ಕಾಮಗಾರಿ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಎಸ್.ಆರ್.ಮೋರೆ (ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.

4. ಉದ್ಭವಿಸುವುದಿಲ್ಲ.

1538 (2109) ಶ್ರೀ ಅಂಗಾರ್.ಎಸ್. (ಸುಳ್ಯ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ ನಗರಕ್ಕೆ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮಂಜೂರಾಗಿರುವ ಹಣ ಎಷ್ಟು :

2. ಯೋಜನೆಗೆ ಅಂದಾಜು ವೆಚ್ಚ ಎಷ್ಟು ;

3. ಯೋಜನೆಗೆ ಬಿಡುಗಡೆಯಾಗಿರುವ ಹಣ ಮತ್ತು ಈವರೆಗೂ ಆಗಿರುವ ವೆಚ್ಚ ಎಷ್ಟು;

4. ಒಳಚರಂಡಿ ಯೋಜನೆಯಿಂದ ದೊರಕುವ ಸೌಲಭ್ಯಗಳಾವುವು ;

5. ಯೋಜನೆಯನ್ನು ಗುತ್ತಿಗೆ ಪಡೆದಿರುವವರು ಯಾರು;

6. ಯೋಜನೆ ಪ್ರಾರಂಭವಾಗಿದ್ದು ಯಾವಾಗ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಸ್.ಸಿ. ಸಚಿವರು)